**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ 209/2012** **ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **02.07.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ 2** ನೇ ಪ್ರತಿವಾದಿ ಪರ ಶ್ರೀ **ವಿ.ಎಂ.ಎನ್.ಪಿ** ವಕೀಲರಿಂದಃ

**1** ಮತ್ತು **2** ನೇ ಪ್ರತಿವಾದಿಯವರಿಂದ ತೊಂದರೆಯಾದಂತೆ ಯಾವುದೇ ಪೋಲಿಸ್ ಠಾಣೆಯಲ್ಲಿ ದೂರು ನೀಡಿರುವುದಿಲ್ಲ. ಅದೇ ರೀತಿ ಸದರಿಯವರಿಂದ ತೊಂದರೆಯಾದಂತೆ ಅವರಿಗೆ ಯಾವುದೇ ನೋಟೀಸು ನೀಡಿರುವುದಿಲ್ಲ. ಸದರಿಯವರ ವಿರುದ್ಧ ದೂರು ನೀಡಲು ಅಥವಾ ನೋಟೀಸು ನೀಡಲು ಯಾವುದೇ ತೊಂದರೆ ಇರಲಿಲ್ಲ. ದಾವಾ ಆಸ್ತಿಯ ಪೂರ್ವ ಭಾಗದಲ್ಲಿ **1** ಮತ್ತು **2** ನೇ ಪ್ರತಿವಾದಿಯವರ ಆಸ್ತಿ ಇದ್ದು ಅದನ್ನು ಸದರಿಯವರು ಕಾನೂನು ಬದ್ದವಾಗಿ ತೆರವುಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಅಳತೆ ಕಾಲ್ಪನಿಕವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನನಗೆ ಸೇರಿರುತ್ತದೆ ಎಂದು ತೋರಿಸಲು ಯಾವುದೇ ಅಧಿಕೃತವಾದ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. **1** ಮತ್ತು **2** ನೇ ಪ್ರತಿವಾದಿಗಳು ದಾವಾ ಆಸ್ತಿಯ ಪೂರ್ವ ಭಾಗದಲ್ಲಿರುವ ತಮ್ಮ ಆಸ್ತಿಯನ್ನು ತೆರವುಗೊಳಿಸಿದ ನಂತರ ಸದರಿಯವರು ಅಸಲು ದಾವಾ ಸಂಖ್ಯೆಃ**239/2011** ರ ದಾವೆಯನ್ನು ಹಿಂಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

**2** ನೇ ಪ್ರತಿವಾದಿಯ ಕ್ರಯ ಪತ್ರಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಅವರ ಆಸ್ತಿಯ ಕ್ರಯ ಪತ್ರವನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. **2** ನೇ ಪ್ರತಿವಾದಿಯವರು ಖರೀದಿಸಿದ ಆಸ್ತಿಯ ಕ್ರಯ ಪತ್ರದಂತೆ ಅವರ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. **2** ನೇ ಪ್ರತಿವಾದಿಯವರ ಆಸ್ತಿಯ ಪಶ್ಚಿಮ ದಿಕ್ಕಿಗೆ ನಿವೇಶನ ಸಂಖ್ಯೆಃ**682** ಇದ್ದು ಸದರಿ ಆಸ್ತಿಯ ನಂತರ ದಾವಾ ಆಸ್ತಿ ಇರುವ ಕಾರಣ ಸದರಿಯವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಪಿ-**34** ರಿಂದ ನಿಪಿ-**38** ಪೋಟೋಗಳು **2** ನೇ ಪ್ರತಿವಾದಿಯವರು ಕಟ್ಟುತ್ತಿರುವ ಕಟ್ಟಡಕ್ಕೆ ಸಂಬಂಧಿಸಿದ ಪೋಟೋ ಆಗಿರುವುದಿಲ್ಲ ಎಂದರೆ ಸರಿಯಲ್ಲ. **2** ನೇ ಪ್ರತಿವಾದಿಯವರು ಕ್ರಯಕ್ಕೆ ಪಡೆದ ಜಾಗಕ್ಕೆ ಸಂಬಂಧಿಸಿದಂತೆ ತಂತಿ ಬೇಲಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು **2** ನೇ ಪ್ರತಿವಾದಿಯವರಿಂದ ಅಕ್ರಮ ಹಣ ಪಡೆಯಲು ಆಧಾರ ರಹಿತ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.ನಾನು ವಾದಿ ಸಂಸ್ಥೆಯ ಮಾಜಿ

ಕಾರ್ಯದರ್ಶಿ ಆಗಿರುವ ಕಾರಣ ನನಗೆ ಈ ದಾವೆಯಲ್ಲಿ ಸಾಕ್ಷ್ಯ ಹೇಳುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲಿಗಾಗಿ 1 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**